ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳು ಏಲಕ್ಕಿ ಬೆಳೆಯಲಿಕ್ಕೆ ಪ್ರಮುಖವಾದ ಜಾಗಗಳು. ಒಟ್ಟು 31 ಲಕ್ಷ ಹೆಕ್ಟೇರುಗಳಲ್ಲಿ ಈ ಬೆಳೆ ತೆಗೆಯುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಬಿರುನಾಣಿ ಕೊಡಗು, ಶಾಂತಹಳ್ಳಿ, ಕುಂದನಹಳ್ಳಿ, ಸೋಮವಾರಪೇಟೆ ಈ ಭಾಗಗಳಲ್ಲಿ ರೋಗ ಬಂದಿದೆಯೆಂದು ನಮ್ಮ ಗಮನಕ್ಕೆ ಬಂದಿದೆ. ಈ ರೋಗ ಕೀಟ ಪ್ರಸಾರದಿಂದ ಬರುತ್ತದೆಯೆಂದು ತಿಳಿದು ಬಂದಿದೆ. ಈ ಕೀಟವನ್ನು ನಿಯಂತ್ರಿಸಲು ಮದ್ದು ಪ್ರಸಾರ ಮಾಡಿ ಈ ರೋಗವನ್ನು ತಡೆಗಟ್ಟಬಹುದು. ಈ ರೋಗವನ್ನು ನಿಯಂತ್ರಣ ಮಾಡಲು 16 ಮಿಲಿ ಲೀಟರ್ ರೋಗಾರ್ ಒಂದು ಮದ್ದು. ಮತ್ತೆ ಹೆಮೊಕಾನ್ಸ್ ಅನ್ನು 10 ಲೀಟರ್ ನೀರಿನಲ್ಲಿ ಬೆರಸಿ ಸಿಂಪರಣೆ ಮಾಡುವಂತೆ ರೈತರಿಗೆ ಈಗಾಗಲೇ ನಮ್ಮ ಇಲಾಖೆಯ ಅಧಿಕಾರಿಗಳು ಸಲಹೆಯನ್ನು ಕೊಟ್ಟಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಈವೊಂದು ಕೀಟನಾಶಕ ಔಷಧಿಗಳನ್ನು ಈ ರೋಗ ತಡೆಗಟ್ಟುವುದಕ್ಕೆ ರಿಯಾಯಿತಿ ದರದಲ್ಲಿ ಒದಗಿಸುವುದಕ್ಕೆ ಇಲಾಖೆಗೆ ಸಾಧ್ಯವಾಗುತ್ತದೆಯೇ?

ಶ್ರೀ ಎ. ಕೃಷ್ಣಪ್ಪ : ಅದರ ಬಗ್ಗೆ ವಿಚಾರ ಮಾಡಿ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

<u>ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯ ಮಂಡನೆ.</u>

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ದಿನಾಂಕ 4-3-1993ರ ಲಿಖಿತ ಮೂಲಕ ಉತ್ತರಿಸುವ 12ನೇ ಪಟ್ಟಿಯಲ್ಲಿರುವ 60 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 1122, 666, 1359, 1360, 1361, 1362, 1453, 1371, 534, 1240, 1245, 1336, 1394, 1388, ಮತ್ತು 1387. ಈ ಪ್ರಶ್ನೆಗಳನ್ನು ಹೊರತುಪಡಿಸಿ, ಇನ್ನು ಉಳಿದ 45 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>ವಿಷಯ : ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ತೋಲುಮಾಮಡಿ ಗ್ರಾಮದ ಕುಡಿಯುವ ನೀರಿನ ವ್ಯವಸ್ಥೆ.</u>

886

ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ತೋಲಮಾಮಡಿ ಗ್ರಾಮವು ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮವಾಗಿದ್ದಕ್ಕಾಗಿ ಕಿರು ನೀರು ಸರಬರಾಜು ಯೋಜನೆಯನ್ನು ಕ್ರಿಯಾ ಯೋಜನೆ 1990-91 ಭಾಗ-1ರಲ್ಲಿ ಸೇರಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸೇರಿಸಿ ಡಿಸೆಂಬರ್ 1990 ರ ಒಳಗೆ ಮುಗಿಸಲು ಯೋಜಿಸಿಕೊಳ್ಳಲಾಗಿದೆಯೆಂದು ದಿನಾಂಕ : 11-7-90 ರಲ್ಲಿ ಉತ್ತರವನ್ನು ನೀಡಿ ಇಲ್ಲಿಯವರೆಗೆ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳದಿರಲು ಕಾರಣವೇನು?

ಇ) ಇಲ್ಲಿಯವರೆಗೆ ಈ ಯೋಜನೆಗೆ ಖರ್ಚಾಗಿರುವ ಹಣವೆಷ್ಟು?

ಈ) ಈ ಯೋಜನೆ ಪೂರ್ಣಗೊಂಡು ಎರಡೂವರೆ ವರ್ಷವಾದರೂ ಸಹಾ ಅಲ್ಲಿನ ನಾಗರೀಕರಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸದಿರಲು ಕಾರಣವೇನು?

ಉ) ಆ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ತುರ್ತಾಗಿ ಸರಕಾರ ಕೈಗೊಂಡಿರುವ ಕ್ರಮವೇನು?

ಊ) ಈ ಗ್ರಾಮಕ್ಕೆ ಕುಡಿಯುವ ನೀರಿನ ಶಾಶ್ವತ ವ್ಯವಸ್ಥೆ ಮಾಡುವುದು ಯಾವಾಗ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 1990-91ರ ಕ್ರಿಯಾ ಯೋಜನೆಯ ಭಾಗ-2 ರಲ್ಲಿ ಸೇರಿತ್ತು.

ಆ) ಸದರಿ ಯೋಜನೆಯನ್ನು ಭಾಗ - 2 ರಲ್ಲಿ ಅನುಮೋದಿಸಿದ್ದುದರಿಂದ ಮತ್ತು ಅನುದಾನ ಲಭ್ಯವಿಲ್ಲದ ಕಾರಣ ಯೋಜನೆಯನ್ನು ತೆಗೆದುಕೊಳ್ಳಲಾಗಲಿಲ್ಲ.

ಇ) ರೂ. 1.03 ಲಕ್ಷಗಳು.

ಈ) ಸದರಿ ಯೋಜನೆಯನ್ನು ಅನುದಾನ ಲಭ್ಯತೆ ಇಲ್ಲದ ಕಾರಣ 90-91ರಲ್ಲಿ ತೆಗೆದುಕೊಳ್ಳಲಾಗಲಿಲ್ಲ. 1990-91ರಲ್ಲಿ ಸದರಿ ಯೋಜನೆಗೆ ಬರ ಪರಿಹಾರ ಕಾರ್ಯಕ್ರಮದಡಿಯಲ್ಲಿ ಜಿಲ್ಲಾಧಿಕಾರಿ, ಗುಲ್ಬರ್ಗಾ ಇವರಿಂದ ಮಂಜೂರಾತಿ ದೊರೆಯಿತು. ಜಲ ಮೂಲ ಇತ್ಯರ್ಥ ಮಾಡುವುದು ವಿಳಂಬವಾಯಿತು.

ಉ) ಸದ್ಯದಲ್ಲಿ, ಈ ಗ್ರಾಮದಲ್ಲಿ 3 ಕೈಪಂಪು ಜೋಡಿತ ಕೊಳವೆ ಬಾವಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿವೆ. ಇದರ ಜೊತೆಗೆ ಒಂದು ಕಿರು ನೀರು ಸರಬರಾಜು ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಊ) ಏಪ್ರಿಲ್ 1993.

<u>ವಿಷಯ : ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ ಕೊಳವೆ ಬಾವಿ ಕೊರೆಯಲು ವ್ಯವಸ್ಥೆ.</u>

885

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ರಾಜೋಳ ಗ್ರಾಮ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮವೆಂದು ಪರಿಗಣಿಸಿ 4 ಕಿ. ಮೀ. ಅಂತರದ ರಾಮತೀರ್ಥದಿಂದ ಪಿ.ವಿ.ಸಿ. ಪೈಪುಗಳನ್ನು ಎಳೆದು ನೇರವಾಗಿ (ಡೈರೆಕ್ಟ್) ಪಂಪು ಮಾಡಿ ನೀರು ಒದಗಿಸಲಾಗಿದೆಯೆಂದು ಸದನದಲ್ಲಿ ದಿನಾಂಕ : 17-12-90ರಂದು ಉತ್ತರ ನೀಡಿದರೂ ಸಹ ನೀರು ಸರಬರಾಜು ಇಲ್ಲದೆ ನಾಗರೀಕರಿಗೆ ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಪ್ರಕಾರ ನೀರು ನೇರವಾಗಿ ಸರಬರಾಜು ಮಾಡಲಾಗಿದೆ ಎಂದು ಸತ್ಯಕ್ಕೆ ದೂರವಾಗಿ ಉತ್ತರ ನೀಡಿ ಸುಮಾರು 2 ವರ್ಷಗಳಿಂದ ಅಲ್ಲಿಯ ನಾಗರೀಕರಿಗೆ ಕುಡಿಯುವ ನೀರಿನ ಅನಾನುಕೂಲ ಮಾಡಿರುವುದು ಸರ್ಕಾರದ ಗಮನಕ್ಕೆ ತಿಳಿದಿದೆಯೆ?

ಇ) 4 ಕಿ.ಮೀ ಅಂತರದಿಂದ ಪಿ. ವಿ. ಸಿ. ಪೈಪುಗಳು ತಾಂತ್ರಿಕವಾಗಿ ಎಳೆಯದೇ ಹಾಗೂ ನೀರಿನ ಒತ್ತಡಕ್ಕೆ ಪೈಪುಗಳು ಒಡೆದು ಹೋಗಿ ನೀರಿನ ಸರಬರಾಜು ಇಲ್ಲದಂತೇ ಆಗಿಲ್ಲವೇ?

ಈ) ದಿನಾಂಕ: 22-1-91ರಂದು ಸದನದಲ್ಲಿ ನೀಡಿರುವ ಉತ್ತರದಲ್ಲಿ ಪಿ.ವಿ.ಸಿ. ಪೈಪುಗಳನ್ನು ಬದಲಾಯಿಸಿ ಜಿ.ಐ. ಪೈಪುಗಳನ್ನು ಎಳೆಯುವ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದ್ದು ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರಕ್ಕೆ ತಿಳಿದಿದೆಯೇ?